## ಇಲ್ಲಿಯವರೆಗೆ



ತನ್ನ ಮಕ್ಕಳಿಗೆ ತಾಯಿಯ ಆಸರೆ ತಪ್ಪಿತಲ್ಲ ಹಾಗೂ ಮಕ್ಕಳನ್ನು ನಿಭಾಯಿಸುವುದು ಹೇಗೆ ಎಂಬ ಚಿಂತೆ ಹರಿಲಾಲನನ್ನು ಕಾಡುತ್ತದೆ. ಸಾರಾಯಿಯ ದಾಸನಾಗಿರುವುದರಿಂದ ಹೆಚ್ಚಿನ ಹಣ ಅಲ್ಲೇ ವ್ಯಯವಾಗುತ್ತಿತ್ತು. ನಿರುದ್ಯೋಗಿಯೂ ಆಗಿದ್ದರಿಂದ ಒಂದು ರೀತಿಯ ಚಕ್ರವ್ಯೂಹದಲ್ಲಿ ಹರಿಲಾಲ ಸಿಲುಕಿದ್ದ. ಇದೇ ಸಮಯದಲ್ಲಿ ಅಕಸ್ಮಾತ್ ಆಗಿ ದಕ್ಷಿಣ ಆಫ್ರಿಕಾದಲ್ಲಿ ಬಾಪೂ ಜತೆಗಿದ್ದ ಪರಾಗರ ಭೇಟಿಯಾಗುತ್ತದೆ. ಪರಾಗ ಬಳಿ ತನ್ನೆಲ್ಲ ಕಥೆಯನ್ನು ಹೇಳಿದಾಗ ಇಬ್ಬರೂ ಸೇರಿ ಉದ್ಯಮ ಆರಂಭಿಸೋಣ. ಒಂದು ಕಚೇರಿ ತೆರೆದು 'ಸತ್ಯಾಗ್ರಹಿ ಬ್ರದರ್ಸ್' ಎಂಬ ಹೆಸರಿಡುವ ಬಗ್ಗೆ ಯೋಚಿಸುತ್ತಾರೆ. ಜೊತೆಗೆ ಕೆಲಸವೂ ಜತೆಯಾಗಿ ಸಾಗುತ್ತದೆ. ಶ್ರೀಮಂತ ಉದ್ಯಮಿ ಮಾಧವದಾಸರೊಂದಿಗೂ ವ್ಯವಹಾರ ನಡೆಯುತ್ತದೆ. ಇದೇ ಸಮಯದಲ್ಲಿ ಬಟ್ಟೆಯ ಪ್ಯಾಕ್‌ಗಳಿದ್ದ ಮಾಲುಗಳಲ್ಲಿ ವ್ಯತ್ಯಾಸ ಉಂಟಾಗಿ ತೊಂದರೆಯಾಗುತ್ತದೆ.

ಇತ್ತ ಕಡೆ ಜಲಿಯನ್‌ವಾಲಾಬಾಗ್‌ನ ಹೆಸರನ್ನೂ ಕೇಳದ ಲಕ್ಷಾಂತರ ಜನ ಎದೆಸೆಟೆದು ನಿಲ್ಲುತ್ತಾರೆ. ರಕ್ತಕ್ರಾಂತಿಯಾಗುವುದನ್ನು ತಪ್ಪಿಸಿ ಬ್ರಿಟಿಷರ ವಿರುದ್ಧ ಹೋರಾಡಲು ಜನ ಮುಂದಾಗುತ್ತಾರೆ. ಕಲ್ಕತ್ತಾದಲ್ಲಿ ದೊಡ್ಡ ಅಧಿವೇಶನ ನಡೆಸಲು ಬಾಪೂ ಮುಂದಾಗುತ್ತಾರೆ. ಹಿಂದೂಮುಸ್ಲಿಮರು ಬಾಪೂ ಅವರ ನಿರೀಕ್ಷೆಯಲ್ಲಿರುತ್ತಾರೆ. ಅಧಿವೇಶನ ಸಮಯದಲ್ಲಿ ಬಾಪೂ ಹರಿಲಾಲನ ಮನೆಯಲ್ಲೇ ಉಳಿಯುವುದಾಗಿ ಪತ್ರಬರೆದಾಗ ಹರಿಲಾಲ ಎಚ್ಚೆತ್ತುಕೊಳ್ಳುತ್ತಾನೆ. ತನ್ನ ಅಸ್ತವ್ಯಸ್ತ ಜೀವನ ರಹಸ್ಯ, ಖಾಲಿ ಬಾಟಲಿಗಳು ಬಾಪೂ ಕಣ್ಣಿಗೆ ಬೀಳಬಾರದು ಎಂದು ಮನೆಯನ್ನು ಸ್ವಚ್ಛಗೊಳಿಸುತ್ತಾನೆ. ಬಾಪೂ ಬಂದವರು ಮನೆಯನ್ನು ನೋಡುತ್ತಾರೆ. ಗೋಡೆಯ ಮೇಲೆ ತೂಗು ಹಾಕಿರುವ ಗುಲಾಬಳ ಭಾವಚಿತ್ರವನ್ನೂ ನೋಡುತ್ತಾರೆ. ಮಕ್ಕಳ ಬಗ್ಗೆ ಚಿಂತಿಸಬೇಡ, ರಾಜಕೋಟದಲ್ಲೇ ಬೆಳೆಯುತ್ತಾರೆ ಎಂದೂ ಸಾಂತ್ವನ ಹೇಳುತ್ತಾರೆ. ಅಸಹಕಾರ ಚಳವಳಿಯಲ್ಲಿ ತಾನೂ ಸಕ್ರಿಯವಾಗಿ ಭಾಗವಹಿಸುವುದಾಗಿ ಹೇಳಿದ ಹರಿಲಾಲ ಖಾದಿ ಬಟ್ಟೆ ಹಾಗೂ ಟೋಪಿ ಧರಿಸಿಕೊಳ್ಳುತ್ತಾನೆ.

ತಮ್ಮ ವಿಚಾರಗಳನ್ನು ಹೇಳಲಿದ್ದಾರೆ...'

ಚಪ್ಪಾಳೆಗಳ ಸದ್ದಿನಿಂದ ಇಡೀ ಮಸೀದಿಯೇ ಪ್ರತಿಧ್ವನಿಸಿತು. ಜನಸಮೂಹ 'ಮಹಾತ್ಮಾ ಗಾಂಧಿ ಕೀ ಜಯ್' ಘೋಷಣೆಗಳಿಂದ ಆಗಸವೇ ಪ್ರತಿಧ್ವನಿಸುವಂತೆ ಜಯಕಾರ ಹಾಕಿತು. ಎಲ್ಲರ ದೃಷ್ಟಿ ಹರಿಲಾಲನ ಮೇಲೆ ನೆಟ್ಟಿತು. ಹರಿಲಾಲನಲ್ಲಿ ಅಕಸ್ಮಾತ್ ಶಕ್ತಿಯ ಸಂಚಾರವಾದಂತಾಗಿ, ಅವನು ಎದ್ದು ನಿಂತ. ಹೆಗಲ ಮೇಲೆ ಹಾಕಿಕೊಂಡಿದ್ದ ಶಾಲನ್ನು ಸರಿಪಡಿಸಿಕೊಂಡು, ಮೆಲ್ಲನೆ ಕೆಮ್ಮಿದ.

ಹರಿಲಾಲನಿಗೆ ಹೇಳುವಂಥ ಹೊಸ ವಿಷಯವಿರಲಿಲ್ಲ. ಅಲ್ಲದೆ ಈ ಸಂದರ್ಭಕ್ಕೆ ಅವನು ಸಿದ್ಧತೆಯನ್ನೂ ಮಾಡಿಕೊಂಡಿರಲಿಲ್ಲ. ಖಿಲಾಫತ್ ಚಳವಳಿಯ ಮೂಲದಲ್ಲೇನಿದೆ, ಅಥವಾ ಈ ಹೋರಾಟದ ಇತಿಹಾಸವೇನು ಎಂಬ ಬಗ್ಗೆ ಅವನಿಗೆ ವಿಶೇಷ ಮಾಹಿತಿ ಇರಲಿಲ್ಲ. ಕೆಲವು ದಿನಗಳಿಂದ ಅಲ್ಲಿಇಲ್ಲಿ ಕೇಳಿದ ಅಥವಾ ಪತ್ರಿಕೆಗಳಲ್ಲಿ ಓದಿದ ವಿಷಯಗಳೇ ಈಗ ಅವನ ಬಂಡವಾಳವಾಗಿತ್ತು. ಕೆಂಪು ಬೋಗುಣಿ ತುರ್ಕಿ ಟೋಪಿಗಳನ್ನು ಸ್ವತಃ ತುರ್ಕಿ ದೇಶವೇ ತೆಗೆದುಹಾಕಿತ್ತು. ತುರ್ಕಿಯ ಒಡೆದ ಸಾಮ್ರಾಜ್ಯವನ್ನು ಬ್ರಿಟಿಷ್ ಸರ್ಕಾರ ಹೊಸದಾಗಿ ನಿರ್ಮಿಸಿತ್ತು ಎಂಬುದಷ್ಟೇ ಹರಿಲಾಲನಿಗೆ ತಿಳಿದಿತ್ತು. ಆದರೆ ಇಲ್ಲಿ ಖಿಲಾಫತ್ ಚಳವಳಿಯ ಹೆಸರಿನಲ್ಲಿ ಸಾವಿರಾರು ಜನರು ಸೇರಿದ್ದಾರೆ, ಇವರಲ್ಲಿ ಬಹುತೇಕ ಜನರಿಗೆ ವಿಷಯದ ಅರಿವಿಲ್ಲ; ಕೆಂಪು ಬೋಗುಣಿ ತುರ್ಕಿ ಟೋಪಿಯೇ ಧರ್ಮ, ಇದೇ ಖಲೀಫಾ, ಇದೇ ಖಿಲಾಫತ್ ಎಂದಷ್ಟೇ ತಿಳಿಯುವ ಜನಸಮೂಹದೆದುರು ಭಾಷಣವನ್ನು ಬಿಗಿಯುವುದು ತನಗೆ ಕಷ್ಟದ ಕೆಲಸವಲ್ಲ ಎಂಬುದು ಸಹ ಹರಿಲಾಲನಿಗೆ ಚೆನ್ನಾಗಿ ತಿಳಿದಿತ್ತು.

ಹರಿಲಾಲ ಎತ್ತರದ ಧ್ವನಿಯಲ್ಲಿ ತನ್ನ ಭಾಷಣವನ್ನು ಮಾಡಿದ. ಹಳೆಯ ವಿಷಯಗಳನ್ನೇ ಹೊಸ ರೀತಿಯಲ್ಲಿ ಹೇಳಿದ. ಅವನ ಒಂದೊಂದು ವಾಕ್ಯಕ್ಕೂ ಚಪ್ಪಾಳೆಗಳು ಮೊಳಗುತ್ತಿದ್ದವು. ಆಗಾಗ ಖಿಲಾಫತ್ ಮತ್ತು ಹರಿಲಾಲನಿಗೆ ಜಯಕಾರವನ್ನು ಹಾಕಲಾಗುತ್ತಿತ್ತು. ಅವನ ಭಾಷಣ ಮುಗಿದ ಕೂಡಲೇ ಮತ್ತೆ 'ಮಹಾತ್ಮಾ ಗಾಂಧೀಜಿ ಕೀ ಜಯ್' ಘೋಷಣೆಗಳಿಂದ ಮಸೀದಿಯ ಗೋಡೆಗಳು ಮತ್ತು ಅಲ್ಲಿಯ ಅಂಗಳ ಪ್ರತಿಧ್ವನಿಸಿತು. ಮೈ ನಡುಗಿಸುವ ಚಳಿಯ ಸ್ಥಾನವನ್ನು ಹೋರಾಟದ ಕಾವು ತೆಗೆದುಕೊಂಡಿತು.

ಆ ಮುಸ್ಲಿಮ್ ಸ್ನೇಹಿತನ ಮಾತು ನಿಜವಾಯಿತು. ಅವನ ಮಾತಿನಂತೆ ಹರಿಲಾಲನ ಭಾಷಣ ಕೇಳಿ ಜನರಲ್ಲಿ ಹೊಸ ಚೈತನ್ಯದ ಸಂಚಾರವಾಯಿತು. ಜನ ಹರಿಲಾಲನ ಮಾತಿನಲ್ಲಿ ಬಾಪೂ ಅವರ ಮಾತನ್ನು ಕೇಳುತ್ತಿರುವಂತೆ ತೋರಿತು. ಬಾಪೂ ತಮ್ಮ ನಡುವೆ ಇದ್ದಾರೆ ಎಂಬ ನಿರ್ಭಯ ವಾತಾವರಣವನ್ನು ಅವರು ಮನಗಾಣುತ್ತಿದ್ದರು. ಸಾವಿರಾರು ಜನರಿಗೆ ಹರಿಲಾಲ ಬಾಪೂ ಅವರ ರೂಪವನ್ನು ಧರಿಸಿ ಬಂದಿದ್ದ. ಬಾಪೂ ಬ್ರಿಟಿಷ್ ಸರ್ಕಾರವನ್ನು ಪರಾಜಯಗೊಳಿಸುತ್ತಾರೆ ಎಂಬ ಮಾತನ್ನು ಅವರು ಶ್ರದ್ಧೆಯಿಂದ ನಂಬುತ್ತಿದ್ದರು; ಅದೇ ಶ್ರದ್ಧೆಯಿಂದ ಅವರು ಹರಿಲಾಲನನ್ನು ತಮ್ಮ ಮುಖಂಡನ ರೂಪದಲ್ಲಿ ನೋಡಿದರು, ಹೀಗಾಗಿ ಹೋರಾಟ ಸುಲಭವಾಗಿ ಕಂಡಿತ್ತು.

ಹರಿಲಾಲನ ಉಪಸ್ಥಿತಿ ಮಾತ್ರದಿಂದ ಬಂದ ಈ ಪರಿವರ್ತನೆ, ಕಲ್ಕತ್ತಾದ ಸರ್ಕಾರದ ತೀಕ್ಷ್ಣ ದೃಷ್ಟಿಯಿಂದ ಮರೆಮಾಚಲು ಹೇಗೆ ಸಾಧ್ಯವಿತ್ತು? ಸರ್ಕಾರದ ಹಿತೈಷಿಗಳು, ಹರಿಲಾಲನ ಶಕ್ತಿ ಸೀಮಿತ ಮತ್ತು ನಗಣ್ಯವೆಂದು ತಿಳಿದಿದ್ದರು. ಆದರೆ ಅವನ ಉಪಸ್ಥಿತಿ ಮಾತ್ರದಿಂದಲೇ ಜನ ಇಷ್ಟು ನಿರ್ಭಯರಾದರೆ, ಇಂಥ ಉಪಸ್ಥಿತಿ ಅಪಾಯಕರವೆಂದೇ ತಿಳಿಯಲಾಯಿತು. ಅಸಹಕಾರ ಮುಂದುವರೆಯುತ್ತಲೇ ಇತ್ತು. ಸರ್ಕಾರ ಈ ವೇಳೆಯಲ್ಲಿ ಯಾವುದೇ ಅಪಾಯವನ್ನು ತಂದುಕೊಳ್ಳಲು ಸಿದ್ಧವಿರಲಿಲ್ಲ. ಹರಿಲಾಲನನ್ನು ತಕ್ಷಣ ಬಂಧಿಸಲಾಯಿತು.

ಪೊಲೀಸ್ ಅಧಿಕಾರಿಗಳಿಂದ ಸುತ್ತುವರೆಯಲ್ಪಟ್ಟಿದ್ದ ಹರಿಲಾಲನನ್ನು ಮ್ಯಾಜಿಸ್ಟ್ರೇಟರ ಎದುರು ಹಾಜರ್ ಪಡಿಸಿದಾಗ ಹರಿಲಾಲ ತನ್ನನ್ನು ಬಚಾವು ಮಾಡಿಕೊಳ್ಳಲಿಲ್ಲ. ಈ ಹಿಂದೆ ಅವನು ಕೈಗಳಿಗೆ ಬೇಡಿ ಹಾಕಿಸಿಕೊಂಡು, ಹೆಗಲ ಮೇಲೆ ತನ್ನ ಲಗ್ಗೇಜನ್ನು ಹೊತ್ತು ಆಫ್ರಿಕಾದ ಪೊಲೀಸರಿಂದ ಸುತ್ತುವರೆದು ಕಾಲ್ನಡಿಗೆಯಲ್ಲಿ ಹೋಗಿದ್ದ. ಆಗ ಹರಿಲಾಲ ಉತ್ಸಾಹದಲ್ಲಿದ್ದ. ಅಂಥ ಉತ್ಸಾಹವನ್ನೇ ಈಗಲೂ ಸಹ ಹರಿಲಾಲ ಮನಗಾಣುತ್ತಿದ್ದ. ಅಸಹಕಾರ ಚಳವಳಿಯಲ್ಲಿ ಆಗ ಸತ್ಯಾಗ್ರಹಿಗಳನ್ನು ಬಂಧಿಸುವುದು ಸಾಮಾನ್ಯ ಸಂಗತಿಯಾಗಿತ್ತು; ಆಗ ಯಾರೂ ಯಾವುದೇ ವಿಧದ ಸ್ಪಷ್ಟೀಕರಣವನ್ನು ನೀಡುತ್ತಿರಲಿಲ್ಲ. ಒಂದು ವೇಳೆ ಅವರನ್ನು ಮುಕ್ತಗೊಳಿಸಿದರೆ ಅವರು ಅಭಿಮಾನದಿಂದ, ಮತ್ತೆ ನಾವು ಇದೇ ಅಪರಾಧವನ್ನು ಮಾಡುತ್ತಿರುತ್ತೇವೆ ಎಂದು ಹೇಳುತ್ತಿದ್ದರು. ಹರಿಲಾಲ ಸಹ ಅದೇ ಚಳವಳಿಯ ನಿಯಮವನ್ನು ಪಾಲಿಸಿದ. ತುಂಬಿದ ನ್ಯಾಯಾಲಯದಲ್ಲಿ ಅವನು ತನ್ನ ವಿರುದ್ಧದ ಆರೋಪವನ್ನು ಕೇಳಿ, ನಂತರ ಗಂಭೀರವಾಗಿ ಹೇಳಿದ

'ನೀವು ಯಾವುದನ್ನು ಅಪರಾಧ ಎಂದು ಹೇಳುತ್ತಿದ್ದೀರೋ, ಅದನ್ನು ಈ ದೇಶದ ನಾಗರಿಕರಾದ ನಾವು ನಮ್ಮ ಮೂಲಭೂತ ಹಕ್ಕು ಎಂದು ತಿಳಿಯುತ್ತೇವೆ. ನಾವು ನಮ್ಮ